ಉಚಿತ ಮತ್ತು ಖಾಸಗಿ ಪ್ರಸರಣಕ್ಕೆ ಮಾತ್ರ

# MAYA CARE FOUNDATION

ವರದಿ ಪತ್ರಿಕೆ

Year: 1st Issue: 1st

ಅಕ್ಟೋಬರ್ - ಡಿಸೆಂಬರ್ 2024

# ಸಂಪಾದಕೀಯ

ವೃದ್ಧಾಪ್ಯವು ಜೀವನದ ಅಂತ್ಯವನ್ನು ಸಮೀಪಿಸುತ್ತಿರುವ ಅಥವಾ ಮೀರುತ್ತಿರುವ ಜನರ ವಯೋಮಾನದ ಅವಸ್ಥೆಯನ್ನು ಸೂಚಿಸುತ್ತದೆ ಮತ್ತು ವಯಸ್ಸಾದವರನ್ನು ಸಾಮಾನ್ಯವಾಗಿ ವೃದ್ಧರು ಹಾಗೂ ಹಿರಿಯ ನಾಗರಿಕರು ಎಂದು ಕರೆಯುತ್ತಾರೆ. ಭಾರತದಲ್ಲಿ 60 ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ವಯಸ್ಸಿನವರಿಗೆ ಹಿರಿಯ ನಾಗರಿಕರು ಎಂಬ ಪದ ಪ್ರಯೋಗವಾಗುತ್ತದೆ. 2050ರ ವೇಳೆಗೆ ವಯಸ್ಸಾದವರ ಜನಸಂಖ್ಯೆ 153 ಮಿಲಿಯನ್‌ನಿಂದ 347 ಮಿಲಿಯನ್‌ಗೆ ಏರುವ ನಿರೀಕ್ಷಿಸಲಾಗಿದೆ. ಈ ವ್ಯಕ್ತಿಗಳು ಒಂಟಿತನ, ಪ್ರತ್ಯೇಕತೆ, ನಿರ್ಲಕ್ಷ್ಯ ಮತ್ತು ದೃಷ್ಟಿ, ಶ್ರವಣ, ಹಾಗೂ ಮಾನಸಿಕ ಆರೋಗ್ಯದ ಹೀನತೆ ಸೇರಿದಂತೆ ಹಲವು ಸವಾಲುಗಳನ್ನು ಎದುರಿಸುತ್ತಾರೆ. ವಯಸ್ಸಾದ ವ್ಯಕ್ತಿಗಳ ರಾಷ್ಟ್ರೀಯ ನೀತಿ ಅವರ ಅಗತ್ಯಗಳನ್ನು ತಲುಪಲು ಕಾನೂನು ಚೌಕಟ್ಟನ್ನು ಒದಗಿಸುತ್ತಿದ್ದು ಆಯುಷ್ಮಾನ್ ಭಾರತ್ ಯೋಜನೆಯಂತಹ ಕಾರ್ಯಕ್ರಮಗಳು ಪ್ರಾಥಮಿಕ ಆರೈಕೆ ಕೇಂದ್ರಗಳಲ್ಲಿ ಅವರಿಗೆ ಸೂಕ್ತವಾದ ಆರೋಗ್ಯ ಸೇವೆಗಳನ್ನು ಒದಗಿಸುತ್ತವೆ. ಹಿರಿಯರನ್ನು ಅವರ ಬುದ್ಧಿವಂತಿಕೆ, ಅನುಭವದೊಂದಿಗೆ ಸಮಾಜಕ್ಕೆ ನೀಡಿದ ಕೊಡುಗೆಗಳು ಯುವ ಪೀಳಿಗೆಗೆ ನೀಡಿದ ಮಾರ್ಗದರ್ಶನ ಮತ್ತು ಸಾಂಸ್ಕೃತಿಕ ಪರಂಪರೆಯ ರಕ್ಷಣೆಯಲ್ಲಿ ಅವರ ಪಾತ್ರಕ್ಕಾಗಿ ಗೌರವಿಸಬೇಕು. ಹಿರಿಯರನ್ನು ಮೌಲ್ಯಯುತವೆಂದು ಪರಿಗಣಿಸಿದಾಗ ಅವರ ಭಾವನಾತ್ಮಕ ಯೋಗಕ್ಷೇಮ ಸುಧಾರಿಸುತ್ತದೆ. ಇದು ಹಲವು ಬಾರಿ ಉತ್ತಮ ಆರೋಗ್ಯ ಫಲಿತಾಂಶಗಳಿಗೆ ದಾರಿಯಾಗಿದೆ. ನಿಯಮಿತ ದೈಹಿಕ ಚಟುವಟಿಕೆ ವಯಸ್ಸಾದವರನ್ನು ಬೆಂಬಲಿಸುವ ಮೂಲಕ ಆರೋಗ್ಯಕರ ತೂಕ ಕಾಪಾಡುವದು, ಕೊಲೆಸ್ಟ್ರಾಲ್ ಕಡಿಮೆ ಮಾಡುವದು, ಮತ್ತು ಅವರ ಮಾನಸಿಕ ಆರೋಗ್ಯ ಸುಧಾರಣೆಗೆ ಸಹಾಯ ಮಾಡುತ್ತದೆ. ವಯಸ್ಸಾದ ವಯಸ್ಕರಿಗೆ ಉದ್ದೇಶದ ಅರ್ಥವನ್ನು ನೀಡುವುದರಿಂದ ಅವರು ಮುಂದಿನ ದಿನಗಳನ್ನು ಉತ್ಸಾಹದಿಂದ ಎದುರುನೋಡಲು ಮತ್ತು ಇತರರೊಂದಿಗೆ ಸಂಪರ್ಕ ಸಾಧಿಸಲು ಸಾಧ್ಯವಾಗುತ್ತದೆ. ಭಾರತದಲ್ಲಿ ಅಟಲ್ ವಯೋ ಅಭ್ಯುದಯ ಯೋಜನೆ (AVYAY) ಮತ್ತು ರಾಷ್ಟ್ರೀಯ ವಯೋಶ್ರೀ ಯೋಜನೆ (RVY) ಸೇರಿದಂತೆ ಸರ್ಕಾರಿ ಉಪಕ್ರಮಗಳು ಹಿರಿಯರಿಗೆ ಆರ್ಥಿಕ ಭದ್ರತೆ ಆರೋಗ್ಯ ಸೇವೆ ಮತ್ತು ಸಹಾಯ ಸಾಧನಗಳನ್ನು ಒದಗಿಸುತ್ತವೆ. ಸರ್ಕಾರೇತರ ಸಂಸ್ಥೆಗಳು ಅಂದರೇ ಹೆಲ್ಪ್‌ಏಜ್ ಇಂಡಿಯಾ, ಮೊಬೈಲ್ ಆರೋಗ್ಯ ಘಟಕಗಳು, ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆ, ಕ್ಯಾನ್ಸರ್ ಮತ್ತು ಉಪಶಾಮಕ ಆರೈಕೆ, ಜೆರಿಯಾಟ್ರಿಕ್ ಫಿಸಿಯೋಥೆರಪಿ ಹಾಗೂ ಡಿಜಿಟಲ್ ಸಾಕ್ಷರತಾ ಕಾರ್ಯಕ್ರಮಗಳ ಮೂಲಕ ಹೆಚ್ಚುವರಿ ಬೆಂಬಲವನ್ನು ನೀಡುತ್ತವೆ. ಮಾಯಾಕೇರ್ ಕೂಡಾ ಈ ಕ್ಷೇತ್ರದಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದು ವೃದ್ಧರು ಮತ್ತು ವಿಶೇಷ ಚೇತನರಿಗೆ ಸಮಗ್ರ ಬೆಂಬಲವನ್ನು ಒದಗಿಸುತ್ತದೆ. 2009ರಲ್ಲಿ ಪ್ರಾರಂಭವಾದ ಮಾಯಾ ಕೇರ್ ತರಬೇತಿ ಮತ್ತು ಉದ್ಯೋಗಾವಕಾಶಗಳ ಮೂಲಕ ವಿಶೇಷ ಚೇತನರನ್ನು ಸಬಲೀಕರಣಗೊಳಿಸುವ ಜೊತೆಗೆ ವೃದ್ಧರಿಗೆ ಉಚಿತ ಸೇವೆಗಳನ್ನು ಒದಗಿಸಿ ಭರವಸೆಯ ಬೆಳಕಾಗಿ ಬೆಳೆದಿದೆ. 72 ಭಾರತೀಯ ನಗರಗಳು ಮತ್ತು ಯುಕೆಯ 4 ನಗರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಮಾಯಾ ಕೇರ್, ಹಿರಿಯರು ಗೌರವಯುತ ಜೀವನ ನಡೆಸಲು ಅಗತ್ಯವಿರುವ ಕಾಳಜಿಯನ್ನು ನೀಡಲು ಶ್ರದ್ಧೆ ವಹಿಸುತ್ತದೆ.

ಮಾಯಾಕೇರ್ ಸಂಸ್ಥೆ ವಿಶಿಷ್ಟ ವಿಧಾನವು ಸ್ವಯಂಸೇವಕರು ಮತ್ತು ವಿಶೇಷ ಚೇತನರ ವೃತ್ತಿಪರರ ತಂಡವನ್ನು ಒಳಗೊಂಡಿದೆ. ಅವರು ವಯಸ್ಸಾದವರಿಗೆ ಒಡನಾಟ, ತಂತ್ರಜ್ಞಾನ ನೆರವು ಮತ್ತು ದೈನಂದಿನ ಬೆಂಬಲವನ್ನು ಒದಗಿಸುತ್ತಾರೆ. ಈ ಮಾದರಿಯು ಹಿರಿಯರ ಅಗತ್ಯಗಳನ್ನು ಪೂರೈಸುವುದಲ್ಲದೆ ವಿಶೇಷ ಚೇತನ ವ್ಯಕ್ತಿಗಳಿಗೆ ಅರ್ಥಪೂರ್ಣ ಉದ್ಯೋಗಾವಕಾಶಗಳನ್ನು ಒದಗಿಸುತ್ತದೆ. ವಿಶೇಷವಾಗಿ ನಾಯಕತ್ವದ ಸ್ಥಾನಗಳಲ್ಲಿ ವಿಶೇಷ ಚೇತನರನ್ನು ಉತ್ತೇಜಿಸಲು ಮಾಯಾ ಕೇರ್ ಬದ್ಧವಾಗಿದೆ ಮತ್ತು ಪ್ರಾಜೆಕ್ಟ್ ಬಿಂದು ತರಹದ ಉಪಕ್ರಮಗಳ ಮೂಲಕ ಕೌಶಲ್ಯಾಭಿವೃದ್ಧಿ ಹಾಗೂ ಆರ್ಥಿಕ ಸ್ವಾತಂತ್ರ್ಯವನ್ನು ವಿಶೇಷ ಚೇತನರಲ್ಲಿ ಉತ್ತೇಜಿಸುತ್ತದೆ. ಈ ಸಮಗ್ರ ವಿಧಾನದಿಂದ ಮಾಯಾ ಕೇರ್ ವೃದ್ಧರು ಮತ್ತು ವಿಶೇಷ ಚೇತನರನ್ನು ಸ್ವಾತಂತ್ರ್ಯ, ಘನತೆ ಮತ್ತು ಜೀವನದ ಗುಣಮಟ್ಟವನ್ನು ಕಾಪಾಡಿಕೊಳ್ಳಲು ಅಗತ್ಯವಾದ ಬೆಂಬಲವನ್ನು ದೊರಕಿಸುತ್ತಿದೆ. ನೀವು ಸ್ವಯಂಸೇವಕರಾಗಿ ಮಾಯಾ ಕೇರ್‌ನೊಂದಿಗೆ ಕೈಜೋಡಿಸುವ ಮೂಲಕ ವಯಸ್ಸಾದ ಅಥವಾ ವಿಶೇಷ ಚೇತನ ವ್ಯಕ್ತಿಗಳನ್ನು ಶಿಫಾರಸು ಮಾಡುವ ಮೂಲಕ ಅಥವಾ ಹಿರಿಯ ಆರೈಕೆ ಸಂಸ್ಥೆಗಳೊಂದಿಗೆ ಪಾಲುದಾರಿಕೆ ಮಾಡುವ ಮೂಲಕ ಈ ಪ್ರಯತ್ನದಲ್ಲಿ ಮಹತ್ವದ ಪಾತ್ರವಹಿಸಬಹುದು. ನಿಮ್ಮ ಬೆಂಬಲ, ದೇಣಿಗೆ, ಸ್ವಯಂಸೇವಕ ಕಾರ್ಯ ಅಥವಾ ಸಹಯೋಗದ ಮೂಲಕ ಮಾಯಾ ಕೇರ್ ತನ್ನ ಸೇವೆಗಳನ್ನು ವಿಸ್ತರಿಸುವ ಮೂಲಕ ಅಗತ್ಯವಿರುವವರಿಗೆ ಉಚಿತ ಮತ್ತು ಸಹಾನುಭೂತಿ ಪೂರ್ಣ ಆರೈಕೆಯನ್ನು ಒದಗಿಸಲು ಮುಂದುವರಿಸಬಹುದು. ಒಟ್ಟಾಗಿ ನಾವು ಹಿರಿಯರು ಮತ್ತು ವಿಶೇಷ ಚೇತನ ವ್ಯಕ್ತಿಗಳಿಗೆ ಭಾರತದಲ್ಲಿ ಮತ್ತು ಅದರಾಚೆ ಅರ್ಥಪೂರ್ಣ ವ್ಯತ್ಯಾಸವನ್ನು ತರಬಹುದು.

# ಫಲಾನುಭವಿಗಳಿಂದ ಪ್ರತಿಕ್ರಿಯೆ

1. ಶ್ರೀಮತಿ ಕಲಾವತಿ**,** ವಯಸ್ಸು **70,** ಬೆಂಗಳೂರು **(9880181399)**
   ನಾನು ಕಲಾವತಿ, ನನ್ನ ಕನಸು ಹೊಲಿಗೆ ಮತ್ತು ಟೈಲರಿಂಗ್ ಕಲಿಯುವದಾಗಿತ್ತು. ಮಾಯಾ ಕೇರ್ ಫೌಂಡೇಶನ್ನನ್ನು ಸಂಪರ್ಕಿಸಿದೆ. ಅವರು ಸ್ವಯಂ ಸೇವಕಿ ರಾಣಿಯವರನ್ನು ನೇಮಿಸಿದರು., ಅವರ ಜೊತೆ ಹೊಲಿಗೆ ಮತ್ತು ಟೈಲರಿಂಗ್ ಕಲಿಯಲು ನನ್ನ ಮೊದಲ ತರಗತಿ ತುಂಬಾ ಚೆನ್ನಾಗಿತ್ತು. ಅವರು ಸಮಯಕ್ಕೆ ಸರಿಯಾಗಿ ಬಂದು ನನಗೆ ಕ್ರಮಬದ್ಧವಾಗಿ ಟೈಲರಿಂಗ್ ಕಲಿಸಿದರು ಪ್ರತಿಯೊಂದು ಚಿಕ್ಕ, ಚಿಕ್ಕ ವಿಷಯಗಳನ್ನು ನನಗೆ ಅರ್ಥವಾಗುವಂತೆ ತಿಳಿಸಿಕೊಟ್ಟರು. ನನಗೆ ಅರ್ಥಮಾಡಿಕೊಳ್ಳಲು ಸಮಯ ಬೇಕಾಗಿರುವುದರಿಂದ ಅವರು ನಿಧಾನವಾಗಿ, ತರಗತಿಯನ್ನು ನಡೆಸಿಕೊಟ್ಟರು. ಇದರಿಂದ ನನಗೆ ಕಲಿಯಲು ಇನ್ನು ಉತ್ಸಾಹ ಬಂದಿತು ಮತ್ತು ಸುಲಭವಾಯಿತು . ನಾನು ಸಾಧ್ಯವಾದಷ್ಟು ಅವರಿಂದ ಕಲಿಯುತ್ತೇನೆ .ರಾಣಿಯಂತಹ ಸ್ವಯಂ ಸೇವಕಿ ನನಗೆ ಸಿಕ್ಕಿರುವದರಿಂದ ನಾನು ತುಂಬಾ ಸಂತೋಷವಾಗಿದ್ದೇನೆ. ಮುಂದಿನ ತರಗತಿಗಳನ್ನು ಇದೇ ಉತ್ಸಾಹದಿಂದ ಕಲಿಯಲು ಪ್ರಯತ್ನ ಪಡುತ್ತೇನೆ.

2. ಶ್ರೀಮತಿ ಮೀನಾ ಈಶ್ವರ್**,** ವಯಸ್ಸು **75,** ಚೆನ್ನೈ**(9866320386)**
   ನಾನು ಮೀನಾ ಈಶ್ವರ್, ಮೂಲತಃ ಚೆನ್ನೈನಲ್ಲಿ ವಾಸಮಾಡುತ್ತಿದ್ದೇನೆ. ನನಗೆ ಮೊಬೈಲ್ ಉಪಯೋಗ ಮಾಡುವುದು ಅಷ್ಟಾಗಿ ಗೊತ್ತಿರಲಿಲ್ಲ, ನಂತರ ಮಾಯಕೇರ್ ಸಂಪರ್ಕಿಸಿದೆ. ಅವರು ಸ್ವಯಂ ಸೇವಕರಾದ ಕಾರ್ತಿಶ್ವರನ್ ಅವರನ್ನು ಮನೆಗೆ ಕಳುಹಿಸಿ ಮೊಬೈಲ್ ಅಲ್ಲಿ ಹೇಗೆ ವ್ಯವಹಾರ ಮಾಡಬೇಕೆಂದು ಚೆನ್ನಾಗಿ ತಿಳಿಸಿಕೊಟ್ಟರು. ಮತ್ತು ನಾನು ಕೇಳಿದ ಎಲ್ಲಾ ಪ್ರಶ್ನೆಗಳಿಗೆ ತಾಳ್ಮೆಯಿಂದ ಉತ್ತರಿಸಿದರು. ಇದರಿಂದ ನನಗೆ ತುಂಬಾ ಸಹಾಯ ಆಗಿದೆ. ಮಾಯಕೇರ್ ತಂಡಕ್ಕೆ ನನ್ನ ಹೃತ್ಪೂರ್ವಕ ಧನ್ಯವಾದಗಳು

3. ಪ್ರಾವಿಡೆನ್ಸ್ ಹೋಮ್ ವೃದ್ಧಾಶ್ರಮ ಬೆಂಗಳೂರು **(8747977228)**
   ನಾನು ವಲ್ಸ ಸಿಸ್ಟರ್, ಪ್ರಾವಿಡೆನ್ಸ್ ಹೋಮ್ ವೃದ್ಧಾಶ್ರಮವನ್ನು ನಡೆಸುತ್ತಿದ್ದೇನೆ. ಇದನ್ನು ಡಿವೈನ್ ಪ್ರಾವಿಡೆನ್ಸ್ ಸಂಸ್ಥೆಯ ಸೊಸೈಟಿ ಆಫ್ ಡಾಟರ್ಸ್ ನಡೆಸುತ್ತಿದೆ.ಮಾಯಾ ಕೇರ್ ಫೌಂಡೇಶನ್ ಮೂಲಕ J.P. ಮೋರ್ಗಾನ್ ಕಂಪನಿಯು ನಮ್ಮ ವೃದ್ಧಾಶ್ರಮಕ್ಕೆ ಭೇಟಿ ನೀಡಿದೆ ಎಂದು ತಿಳಿಸಲು ನಾವು ತುಂಬಾ ಸಂತೋಷಪಡುತ್ತೇವೆ. ಅವರು ನಮ್ಮ ನಿವಾಸಿಗಳಿಗೆ ಮನರಂಜನೆ ನೀಡಿದ್ದು ಕೆಲವೊಂದು ಉಡುಗೊರೆಗಳನ್ನೂ ತರಲು ಮರೆಯಲಿಲ್ಲ. ಈ ಅನುಭವವು ನಮ್ಮ ನಿವಾಸಿಗಳಿಗೆ ನಿಜವಾಗಿಯೂ ಹರ್ಷದ ಕ್ಷಣವಾಯಿತು ಅವರು ಮಾಡಿಸಿದ ಚಟುವಟಿಕೆಗಳನ್ನು ತುಂಬಾ ಆನಂದಿಸಿದರು.ಮಾಯಾ ಕೇರ್ ಫೌಂಡೇಶನ್ ಮತ್ತು ವಿಶೇಷವಾಗಿ ಪಲ್ಲವಿ ಮೇಡಂ ಮತ್ತು ಅವರ ತಂಡದೊಂದಿಗೆ J.P. ಮೋರ್ಗಾನ್ ಕಂಪನಿಯ ಸ್ವಯಂಸೇವಕರು ಹಾಗೂ ಗುಡ್ಡೆರಾ ಕಂಪನಿಯ ಮೊಹಮ್ಮದ್ ಅವರ ಸಹಕಾರಕ್ಕೆ ನಾವು ಅತೀವ ಕೃತಜ್ಞರಾಗಿದ್ದೇವೆ.ಮಾಯಾ ಕೇರ್‌ನ ಮತ್ತೊಬ್ಬ ಸ್ವಯಂಸೇವಕ ಶ್ರೀ ವಿಕಾಸ್ ಶರ್ಮಾ ಅವರಿಗೂ ಧನ್ಯವಾದಗಳು, ಅವರು ಅನೇಕ ಬಾರಿ ನಮ್ಮ ವೃದ್ಧಾಶ್ರಮಕ್ಕೆ ಬಂದು ನಮ್ಮ ನಿವಾಸಿಗಳಿಗೆ ಮನರಂಜನೆ ನೀಡಿದರು.ಪಲ್ಲವಿ ಮೇಡಂ ಮತ್ತು ಅವರ ತಂಡಕ್ಕೆ ಮತ್ತೊಮ್ಮೆ ಹೃತ್ಪೂರ್ವಕ ಧನ್ಯವಾದಗಳು.

# ಮಾಯಕೇರ್ ಚಟುವಟಿಕೆಗಳು

1. ಬೆಂಗಳೂರು ಮತ್ತು ಕೊಯಿಮತ್ತೂರು ಮಾಯಕೇರ್ ಸ್ವಯಂಸೇವಕರು ಸ್ವಾತಂತ್ರ್ಯ ದಿನಾಚರಣೆಯನ್ನು ವೃದ್ಧರ ಜೊತೆ ಆಚರಿಸಿದರು.ಬೆಂಗಳೂರಿನ ಸ್ವಯಂ ಸೇವಕರಾದ ವಿಕಾಶ್ ಶರ್ಮ ಅವರು ಪ್ರಾವಿಡೆನ್ಸ್ ವೃದ್ಧಾಶ್ರಮಕ್ಕೆ ಭೇಟಿ ನೀಡಿ ಅಲ್ಲಿ 30ಕ್ಕೂ ಅಧಿಕ ವೃದ್ಧರಿಗೆ ಬಾವುಟ ಮತ್ತು ಸಿಹಿಯನ್ನು ಹಂಚುವುದರ ಮೂಲಕ ಆಚರಿಸಿದರು.ಕೊಯಿಮತ್ತೂರಿನ ಸ್ವಯಂ ಸೇವಕರಾದ ತಮಿಜಾರ್ಸಿ, ಆರತಿ, ರಿಯಾ, ಪ್ರವೀಣ,ಹಾಗೂ ಶಕ್ತಿಯವರು ಹೆಲ್ಪಿಂಗ್ ಹಾರ್ಟ್ಸ್ ವೃದ್ಧಾಶ್ರಮಕ್ಕೆ ಭೇಟಿ ನೀಡಿ ಸಂಗೀತ, ನೃತ್ಯ ಮಾಡಿ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಿದರು.
2. ಬೆಂಗಳೂರಿನ ಸುಧಾಮ ವೃದ್ಧಾಶ್ರಮಕ್ಕೆ ಸ್ವಯಂ ಸೇವಕಿಯಾದ ದಿವ್ಯ ಅವರು ಭೇಟಿ ನೀಡಿ ರಾಖಿಯನ್ನು ಕಟ್ಟಿ ಸಿಹಿಯನ್ನು ಹಂಚುವುದರ ಮೂಲಕ ರಕ್ಷಾಬಂಧನವನ್ನು ಸಂಭ್ರಮಿಸಿದರು.
3. ಬೆಂಗಳೂರಿನ ಕೆ. ರ್. ಪುರಂ ಸರ್ಕಾರಿ ಆಸ್ಪತ್ರೆಯಲ್ಲಿ ಮಾಯಕೇರ್ ಹೆಲ್ಪ್ ಡೆಸ್ಕ್ ನ್ನು ಆರಂಭಿಸಿದರು. ಪ್ರತಿದಿನವೂ ಅಲ್ಲಿಗೆ ಬರುವ ವಯಸ್ಸಾದವರಿಗೆ ಮಾಯಕೇರ್ ಸ್ವಯಂ ಸೇವಕರು ಸಹಾಯ ಮಾಡುತ್ತಾರೆ. ಅಂದರೆ ಅರ್ಜಿಯನ್ನು ಬರೆಯುದು, ಸರತಿ ಸಾಲಿನಲ್ಲಿ ನಿಲ್ಲುವುದು,ವೀಲ್ ಚೇರನ್ನು ಒದಗಿಸುವುದು ಮುಂತಾದವು.

## 4. ಸರೋಜಮ್ಮನವರ ಆಶಾಕಿರಣ

ನಾಗವಾರಪಾಳ್ಯ, ಬೆಂಗಳೂರು ಇಲ್ಲಿ 83 ವರ್ಷ ವಯಸ್ಸಿನ ಸರೋಜಮ್ಮನವರು ತಮ್ಮ ಜೀವನದಲ್ಲಿ ಧೈರ್ಯತೆಯಿಂದ ಮುಂದೆ ಸಾಗಿದ್ದರು. ಶಿಕ್ಷಣದ ಕೊರತೆಯ ನಡುವೆಯೂ, 2003ರಲ್ಲಿ ತಮ್ಮ ಪತಿಯವರನ್ನು ಕಳೆದುಕೊಂಡ ನಂತರ, ಐದು ಮಕ್ಕಳನ್ನು ಒಬ್ಬರೇ ಬೆಳೆಸಿದರು. ಮಕ್ಕಳು ತಮ್ಮ ಜೀವನವನ್ನು ಕಟ್ಟಿಕೊಂಡ ನಂತರ, ಸರೋಜಮ್ಮ ಬೆಂಗಳೂರಿನಲ್ಲಿ ಒಂಟಿಯಾಗಿ ವಾಸಿಸುತ್ತಿದ್ದರು, ವಯಸ್ಸಿನ ಮತ್ತು ಆರೋಗ್ಯದ ಸಮಸ್ಯೆಗಳನ್ನು ಎದುರಿಸುತ್ತ.

ಒಂದು ದಿನ ಕೆ.ಆರ್. ಪುರಂ ಆಸ್ಪತ್ರೆಯಲ್ಲಿ ಔಷಧಿಗಾಗಿ ಹೋರಾಡುತ್ತಿರುವಾಗ, ಮಾಯಾ ಕೇರ್ ಫೌಂಡೇಶನ್‌ನ ಸ್ವಯಂಸೇವಕರು ಅವರ ಸಹಾಯಕ್ಕೆ ಬಂದರು. ಅವರ ನೆರವು ಸರೋಜಮ್ಮನವರಿಗೆ ಸಂತೃಸಿತು ಮತ್ತು ಅವರಿಗೆ ಒಂದು ಹೊಸ ಕುಟುಂಬದ ಅನುಭವವನ್ನು ನೀಡಿತು. ಕೆಲವು ದಿನಗಳಲ್ಲಿ, ಅವರು ತಮ್ಮ ದಿನನಿತ್ಯದ ಕಾರ್ಯಗಳಿಗೆ ಮಾಯಾ ಕೇರ್ ಮೇಲೆ ಅವಲಂಬಿತರಾದರು. ಮಾಯಾ ಕೇರ್ ಅವರುಗಳಿಗೆ ಅಗತ್ಯ ಸೇವೆಗಳು ನೀಡಿದಷ್ಟೇ ಅಲ್ಲದೆ, ಅವರ ಜೀವನದಲ್ಲಿ ಹೊಸ ಆಶಾಕಿರಣವನ್ನು ಹೂಡಿತು, ಒಂಟಿತನವನ್ನು ಸಮಾಧಾನವಾಗಿ ಪರಿವರ್ತಿಸಿತು.

ಸರೋಜಮ್ಮನವರ ಕಥೆ, ಮಾನವೀಯತೆ ಮತ್ತು ಸಮುದಾಯದ ಕರುಣೆಯ ಶಕ್ತಿಯನ್ನು ತೋರಿಸುತ್ತದೆ ಹೇಗೆ ಮಾಯಾ ಕೇರ್ ಅವರ ವೃದ್ಧಾಪ್ಯದ ದಿನಗಳಲ್ಲಿ ಅವರ ಜೀವನವನ್ನು ಸಂಪೂರ್ಣವಾಗಿ ಬದಲಿಸಿತು ಎಂಬುದನ್ನು ವಿವರಿಸುತ್ತದೆ



ಸ್ವಯಂ ಸೇವಕಿ ದಿವ್ಯ ರಕ್ಷಾಬಂಧನವನ್ನು ಸುಧಾಮ ವೃದ್ದಾಶ್ರಮದಲ್ಲಿ ಆಚರಿಸಿದರು



**J. P morgan** ಮತ್ತು ಮಾಯಾ ಕೇರ್ ಸ್ವಯಂ ಸೇವಕರು ಪ್ರಾವಿಡೆನ್ಸ್ ವೃದ್ದಾಶ್ರಮದಲ್ಲಿ ಕಳೆದ ಸಮಯ



ಕೊಯಿಮತ್ತೂರಿನ ಸ್ವಯಂ ಸೇವಕ ಮೈಲೇಶ್ ರವರು ಸವಾಲಯಂ ವೃದ್ದಾಶ್ರಮದಲ್ಲಿ ಚಟುವಟಿಕೆ ನಡೆಸುತ್ತಿರುವುದು.



ಹೆಲ್ಪ್ ಡೆಸ್ಕಲ್ಲಿ ವೃದ್ಧರಿಗೆ ಸ್ವಯಂ ಸೇವಕಿ ಲಲಿತಾ ವೀಲ್ ಚೇರ್ ಒದಗಿಸಿರುವುದು

Year : 1st Issue : 1 ಅಕ್ಟೋಬರ್ - ಡಿಸೆಂಬರ್ 2024

# MAYA CARE FOUNDATION

ಉಚಿತ ಮತ್ತು ಖಾಸಗಿ ಪ್ರಸರಣಕ್ಕೆ ಮಾತ್ರ

## ಮಾಯಾ ಕೇರ್ ರಾಷ್ಟ್ರೀಯ ಸಹಾಯವಾಣಿ: 1800 572 1343

| ಮಾಯಾ ಕೇರ್ ಭಾರತದ 72 ನಗರಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. | FOR WHATSAPP |
|---|---|
| ದಕ್ಷಿಣ ಭಾರತದಲ್ಲಿ ಕೊಯಮತ್ತೂರು, ಚೆನ್ನೈ, ಪಾಂಡಿಚೇರಿ, ಹೈದರಾಬಾದ್, ಬೆಂಗಳೂರು, ಇದನ್ನು ಒಳಗೊಂಡಂತೆ ಭಾರತದ 72 ನಗರಗಳಲ್ಲಿ ಮತ್ತು ಯು. ಕೆ ಯ 4 ನಗರಗಳಲ್ಲಿ ಕಾರ್ಯ ನಿರ್ವಹಿಸುತ್ತಿದೆ | 9552510400/9552510411<br>8055995966 |

ಕೆಳಗೆ ನೀಡಿರುವ ಹಿರಿಯ ನಾಗರಿಕರ ಉಚಿತ ಸೇವೆಗಳನ್ನು ವಿಶೇಷ ಚೇತನ ವೃತ್ತಿಪರರಿಂದ ಸಂಪೂರ್ಣವಾಗಿ ನಿರ್ವಹಿಸಲಾಗುತ್ತದೆ

1. ಹಿರಿಯ ನಾಗರಿಕರಿಗೆ ಅವರ ಮನೆಯ ಹತ್ತಿರ ವಾಕಿಂಗ್ ಮಾಡಲು ಸಹಾಯ ಮಾಡುವುದು,ಪತ್ರಿಕೆಗಳು,ಧಾರ್ಮಿಕ ಪುಸ್ತಕ ಗಳನ್ನು ಓದುವುದು. ಆಸ್ಪತ್ರೆಗೆ ಕರೆದುಕೊಂಡು ಹೋಗುವುದು, ವೈದ್ಯರನ್ನು ಭೇಟಿ ಮಾಡಿಸುವುದು, ಬ್ಯಾಂಕ್ ಕೆಲಸಗಳಿಗೆ ಸಹಾಯ ಮಾಡುವುದು, ಹಿರಿಯ ನಾಗರಿಕರನ್ನು ಬಸ್ /ರೈಲ್ವೆ /ವಿಮಾನ ನಿಲ್ದಾಣಗಳಿಗೆ ಕರೆದುಕೊಂಡು ಹೋಗವುದು, ಆಸ್ಪತ್ರೆಗೆ ದಾಖಲಾದ ಸಮಯದಲ್ಲಿ ICU ಹೊರಗೆ ರೋಗಿಯೊಂದಿಗೆ ಕುಳಿತುಕೊಳ್ಳುವುದು.
   .ಬ್ಯಾಂಕ್‌ನಲ್ಲಿ ನಗದು/ಚೆಕ್‌ಗಳನ್ನು ಹಿಂಪಡೆಯಲು/ಠೇವಣಿ ಮಾಡಲು ಸಹಾಯ ಮಾಡುವುದು ಸ್ಮಾರ್ಟ್‌ಫೋನ್‌ಗಳ ಬಳಕೆ ಮತ್ತು ತಾಂತ್ರಿಕ ಸಹಾಯ ಮಾಡುವುದು

| Website - www.mayacare.org | Email : service@mayacare.org |
|---|---|

Merchant Name : MAYA CARE FOUNDATION
Mobile Number : 7721053535

Deduction under I-Tax Act is Available

NAME OF THE A/C - MAYA CARE FOUNDATION
NAME OF THE BANK : ICICI BANK LIMITED (BRANCH : TILAK ROAD,PUNE)
ACCOUNT NO. : 187501000462
IFSC CODE : ICIC0001875

**Book-Post**

| **FROM:** | **TO:** |
|---|---|
| **MAYA CARE FOUNDATION**<br>1214 Shukrawar Peth, Africa House, Subhash Nagar, Lane no.04,Pune-411002 | **Shree / Shrimati**<br>____________________<br>____________________<br>____________________. |